ದಿನಾಂಕ 24-06-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ-**

1. ಗುನ್ನಾ ಸ್ಥಳದ ಚೆಕ್ ಬಂದಿ ಹೇಳಲು ಬರುತ್ತದೆಯೇ ಎಂದರೆ ಸಾಕ್ಷಿಯು ಮೇಲ್ಗಡೆ ಊರು ಇದೆ, ಕೆಳಗಡೆ ದಾರಿ ಇದೆ, ತಾನು ನಿಂತಿರುವ ಸ್ಥಳದಿಂದ ಮುಂದೆ ತೋರಿಸಿ ಗಟಾರ ಇದೆ, ತಾನು ನಿಂತಿರುವ ಸ್ಥಳದಿಂದ ಹಿಂದೆ ತೋರಿಸಿ ದಾರಿ & ಬಾವಿ ಇದೆ ಎನ್ನುತ್ತಾರೆ. ಸದರಿ ಸ್ಥಳದ ಸರ್ವೆ ನಂ.1 ರಲ್ಲಿ 2 ಗುಂಟೆ, ಸರ್ವೆ ನಂ. 2 ರಲ್ಲಿ 3 ಗುಂಟೆ ಇದೆ. ಸದರಿ 3 ಗುಂಟೆಯೇ ಗುನ್ನಾ ಸ್ಥಳ ಎಂದರೆ ಸರಿ.

2. ಆ ಕಾಲಕ್ಕೆ ನನ್ನ ಹೆಂಡತಿಗೆ ಮೂಕಪೆಟ್ಟು ಆಗಿತ್ತು. ಆಕೆಯ ಬಟ್ಟೆ ಹರಿದಿದ್ದವು, ಬಳೆಗಳು ಹೊಡೆದಿದ್ದವು. ನನ್ನ ಪ್ರಕಾರ ನನ್ನ ಹೆಂಡತಿ 5 ದಿನ ಆಸ್ಪತ್ರೆಯಲ್ಲಿದ್ದರು, ನಂತರ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದರು. ದೂರು ಕೊಡಲು 2-3 ತಾಸುಗಳು ಹೋಗಿಬಂದು ಪುನಃ ಆಸ್ಪತ್ರೆಗೆ ದಾಖಲಾಗಿದ್ದರು. ಖಾಸಗಿ ಆಸ್ಪತ್ರೆಯಲ್ಲಿ 2-3 ದಿನಗಳ ಕಾಲ ಇದ್ದರು. ಅದರ ಹೆಸರು ನನಗೆ ಗೊತ್ತಿಲ್ಲ. ಖಾಸಗಿ ಆಸ್ಪತ್ರೆಗೆ ಸಂಬಂಧಿಸಿದ ದಾಖಲೆಗಳನ್ನು ಪೋಲೀಸರಿಗೆ ಕೊಟ್ಟಿರುತ್ತೇನೆ. ನನ್ನ ಹೆಂಡತಿಗೆ ಯಾವುದೇ ಹೊಲಿಗೆ ಬಿದ್ದಿರಲಿಲ್ಲ.

3. ನನ್ನ ಮೊಣಕಾಲಿನ ಎಲುಬು ಮುರಿದಿತ್ತು, ರಾಡ್ ಹಾಕಿಸಿಕೊಂಡಿದ್ದೇನೆ. ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಪೋಲೀಸರಿಗೆ ಕೊಟ್ಟಿರುತ್ತೇನೆ. ನಾನು 10 ದಿನಗಳ ಕಾಲ ಆಸ್ಪತ್ರೆಯಲ್ಲಿ ದಾಖಲಿದ್ದೆ, ಪುನಃ ಬೆಂಗಳೂರಿಗೆ ಹೋಗಿ ತೋರಿಸಿಕೊಂಡು ಬಂದಿದ್ದೆನು. ನನಗೆ ಒಂದು ಗೇಣು ಹೊಲಿಗೆ ಬಿದ್ದಿತ್ತು. ನಾನು ಸಿಂಧನೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೆ.

4. ಪ್ರ. ವ. ವರದಿ ದಾಖಲಿಸಲು ನೀವು ಮಾಹಿತಿ ಕೊಟ್ಟಿಲ್ಲ ಎಂದರೆ ಸಾಕ್ಷಿಯು ಇಲ್ಲ ನಾನು ದೂರು ಕೊಡಲು ಹೋಗಿರಲಿಲ್ಲ ಎನ್ನುತ್ತಾರೆ. ನಿಮ್ಮ ಮಕ್ಕಳಿಗೆ ಗಾಯಗಳಾಗಿದ್ದವಾ ಎಂದರೆ ಸಾಕ್ಷಿಯು ಹೌದು ಆಗಿದ್ದವು, ಹೊಲಿಗೆ ಬಿದ್ದಿದ್ದವು, ಇನ್ನೊಬ್ಬ ಮಗನಿಗೆ ಮೈಗೆ, ಕಾಲಿಗೆ, ಕೈಗೆ, ತಲೆಗೆ ಮೂಕಪೆಟ್ಟು ಆಗಿದ್ದವು ಎನ್ನುತ್ತಾರೆ.

5. ನಿಮ್ಮ ಪ್ರಕಾರ ಒಂದೇ ಕಟ್ಟಿಗೆಯಿಂದ ಗಾಯಗಳಾಗಿದ್ದವಾ ಎಂದರೆ ಸಾಕ್ಷಿಯು ಆ ಮೂವರ ಕೈಗಳಲ್ಲಿ 3-4 ಕಟ್ಟಿಗೆಗಳು ಇದ್ದವು ಎನ್ನುತ್ತಾರೆ.

6. ನಮ್ಮ ಇಬ್ಬರು ಮಕ್ಕಳು ಸಿ.ಸ. ಆಸ್ಪತ್ರೆಯಲ್ಲಿ 5-6 ದಿನಗಳ ಕಾಲ ಇದ್ದರು. ನಿಮ್ಮ ಪ್ರಕಾರ ನಾನು ಪೋಲೀಸರಿಗೆ ಆ 3-4 ಕಟ್ಟಿಗೆಗಳನ್ನು ತೋರಿಸಿರುತ್ತೀರಾ ಎಂದರೆ ಸಾಕ್ಷಿಯು ನಾನು

ಆಸ್ಪತ್ರೆಯಲ್ಲಿದ್ದೆ ಎನ್ನುತ್ತಾರೆ. ನಿಮ್ಮ ಹೆಂಡತಿ ಕಟ್ಟಿಗೆ ತೋರಿಸಿರುತ್ತಾರಾ ಎಂದರೆ ಸಾಕ್ಷಿಯು ನನ್ನ ಹೆಂಡತಿ 4 ಕಟ್ಟಿಗೆ ತೋರಿಸಿರುತ್ತಾರೆ ಎನ್ನುತ್ತಾರೆ.

7. ನಿಮ್ಮ ತಮ್ಮ ನಿಮ್ಮ ಜಂಟಿ ಕುಟುಂಬದ ಆಸ್ತಿಯಲ್ಲಿ ಸಮಭಾಗ ಕೇಳದೇ ಇದ್ದಿದ್ದರೆ ಈ ಜಗಳ ಆಗುತ್ತಿರಲಿಲ್ಲ, ನೀವು ಕೇಸ್ ಮಾಡುತ್ತಿರಲಿಲ್ಲ ಎಂದರೆ ಸರಿ.

8. ನೀವು ಹೇಳಿದಂತೆ ಆರೋಪಿತರು ನಿಮಗೆ, ನಿಮ್ಮ ಹೆಂಡತಿ, ಮಕ್ಕಳಿಗೆ ಹೊಡೆದಿಲ್ಲ ಎಂದರೆ ಸರಿಯಲ್ಲ. ನಿಮ್ಮ ಹೆಂಡತಿಗೆ ಹೊಡೆದು, ಸೀರೆ ಹರಿದು, ಬಳೆ ಹೊಡೆದಿಲ್ಲ ಎಂದರೆ ಸರಿಯಲ್ಲ. ನೀವು, ನಿಮ್ಮ ಹೆಂಡತಿ & ಮಕ್ಕಳು ಆಸ್ಪತ್ರೆಯಲ್ಲಿ ದಾಖಲಾಗಿ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ.

9. ನೀವು ನಿಮ್ಮ ಸಮಾಜದಲ್ಲಿ ಬಳಕೆಯಲ್ಲಿದ್ದೀರಿ ಎಂದರೆ ಸರಿ. ನಿಮ್ಮ ತಮ್ಮ ಅನಕ್ಷರಸ್ಥ & ಅಮಾಯಕ ಎಂದರೆ ಸಾಕ್ಷಿಯು ಇಲ್ಲ ಆತ ಶಾಲೆ ಕಲಿತಿದ್ದಾನೆ ಎನ್ನುತ್ತಾರೆ. ಆಸ್ತಿಯಲ್ಲಿ ಭಾಗ ಕೇಳಿದ್ದರಿಂದ ಆತನ ಮೇಲೆ ಈ ರೀತಿ ಸುಳ್ಳು ಕೇಸು ಮಾಡಿ ತೊಂದರೆ ಕೊಡುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಮು. ವಿ. ಯಲ್ಲಿ ಹೇಳಿದಂತೆ ಯಾವುದೇ ಘಟನೆ ನಡೆದಿಲ್ಲ, ನಿಮಗೆ ಘಟನೆಯಲ್ಲಿ ಕಾಲು ಮುರಿದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ:-**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

C/c **2 ನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ.,ಸಿಂಧನೂರು.**